ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,

ಆನಂದರಾವ್ ವೃತ್ತ, ಬೆಂಗಳೂರು-09

---

ಸಂಖ್ಯೆ:ಮುಆಅ/ಆಪ್ತ/19/2018-19 ದಿನಾಂಕ:14.12.2018

## ಸುತ್ತೋಲೆ

ವಿಷಯ ಪಿಂಚಣಿ ಪ್ರಕರಣಗಳನ್ನು ನಿಗಧಿತ ಕಾಲಾವಧಿಯೊಳಗೆ ಶೀಘ್ರವಾಗಿ ಇತ್ಯರ್ಥಗೊಳಿಸುವ ಬಗ್ಗೆ.

ಉಲ್ಲೇಖ ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ(ವಿಶೇಷ)/101/ಪಿಇಎನ್/2018 ದಿ:08.12.2018

*******

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಇನ್ನು ಮುಂದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ವಯೋನಿವೃತ್ತಿ ಹೊಂದಲಿರುವ ಸರ್ಕಾರಿ ನೌಕರರ ನಿವೃತ್ತಿ ವೇತನ ದಾಖಲೆಗಳನ್ನು 12 ತಿಂಗಳು ಮುಂಚಿತವಾಗಿ (ಪ್ರಸ್ತುತ ಅನುಸರಿಸುತ್ತಿರುವ 6 ತಿಂಗಳ ಅವಧಿಯ ರೂಢಿಗತ ಪದ್ಧತಿಯನ್ನು ಮಾರ್ಪಡಿಸಿ) ತಯಾರಿಸಲು ಪ್ರಾರಂಭಿಸಿ, ಹಾಗೆ ತಯಾರಿಸಿದ ಸಂಪೂರ್ಣ ದಾಖಲೆಗಳನ್ನು ವಯೋನಿವೃತ್ತಿಗೆ ಕನಿಷ್ಠ 03 ತಿಂಗಳ ಮುಂಚಿತವಾಗಿ ಮಹಾಲೇಖಪಾಲರಿಗೆ ಕಡ್ಡಾಯವಾಗಿ ಕಳುಹಿಸುವ ಮತ್ತು ವಯೋನಿವೃತ್ತಿ ಹೊಂದಲಿರುವ ಪತ್ರಾಂಕಿತ ಸರ್ಕಾರಿ ಅಧಿಕಾರಿಗಳ ಸಂಬಂಧದಲ್ಲಿ ನಮೂನೆ 7-ಎ ರಲ್ಲಿ ಅವಶ್ಯಕ ಮಾಹಿತಿಯನ್ನು, ಮಂಜೂರಾತಿಯೊಂದಿಗೆ ವಯೋನಿವೃತ್ತಿಯ ದಿನಾಂಕಕ್ಕೆ ಒಂದು ತಿಂಗಳ ಮುಂಚಿತವಾಗಿ ಮಹಾಲೇಖಪಾಲರಿಗೆ ಕಡ್ಡಾಯವಾಗಿ ಕಳುಹಿಸುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದೆಂದು ಇಲಾಖೆಯ ಎಲ್ಲಾ ಕಛೇರಿ ಮುಖ್ಯಸ್ಥರುಗಳಿಗೆ ಈ ಮೂಲಕ ಸೂಚಿಸಲಾಗಿದೆ.

ನಿವೃತ್ತಿ ವೇತನವನ್ನು ತಡವಾಗಿ ಪಾವತಿಸಿದಲ್ಲಿ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಹಾಗೆ ಪಾವತಿಸಬೇಕಾದ ಬಡ್ಡಿಯನ್ನು ವಿಳಂಬಕ್ಕೆ ಕಾರಣರಾದಂತಹ ನಿವೃತ್ತಿ ವಸೂಲಿ ಮಾಡಬೇಕಾಗುತ್ತದೆ. ಅಲ್ಲದೆ, ಅಂತಹ ವಿಳಂಬಕ್ಕೆ ಕಾರಣರಾದಂತಹ ಅಧಿಕಾರಿ ಮತ್ತು ನೌಕರರು ಶಿಸ್ತು ಕ್ರಮಕ್ಕೂ ಬದ್ಧರಾಗುತ್ತಾರೆಂಬ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದೆಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸೂಚಿಸಿರುವುದನ್ನು ಎಲ್ಲರ ಗಮನಕ್ಕೆ ತರಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಉಲ್ಲೇಖಿತ ಸರ್ಕಾರದ ಸುತ್ತೋಲೆಯ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಮುಖ್ಯ ಆಡಳಿತಾಧಿಕಾರಿಗಳು
ಆರೋಗ್ಯ ಮತ್ತು ಕು.ಕ.ಸೇವೆಗಳು,
ಬೆಂಗಳೂರು

ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ಜಿಲ್ಲಾ ಆಕುಕ ಅಧಿಕಾರಿಗಳು/ಜಿಲ್ಲ ಶಸ್ತ್ರಚಿಕಿತ್ಸಕರುಗಳು.
2. ಎಲ್ಲಾ ಸ್ವಾಯತ್ತ ಸಂಸ್ಥೆಯ ಮುಖ್ಯಸ್ಥರುಗಳು.
3. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆಕುಕ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
4. ಎಲ್ಲಾ ಕಛೇರಿ ಮುಖ್ಯಸ್ಥರು/ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳು.

Scanned by CamScanner

## ಕರ್ನಾಟಕ ಸರ್ಕಾರ

ಸಂಖ್ಯೆ: ಆಇ(ವಿಶೇಷ)/101/ಪಿಇಎನ್/2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 08-12-2018.

### ಸುತ್ತೋಲೆ

ವಿಷಯ: ಪಿಂಚಣಿ ಪ್ರಕರಣಗಳನ್ನು ನಿಗಧಿತ ಕಾಲಾವಧಿಯೊಳಗೆ ಚುರುಕಾಗಿ ಮತ್ತು ತ್ವರಿತವಾಗಿ ಇತ್ಯರ್ಥಗೊಳಿಸುವ ಬಗ್ಗೆ.

***

1. ಸರ್ಕಾರಿ ನೌಕರನು ಚಾಲ್ತಿಯಲ್ಲಿರುವ ನಿವೃತ್ತಿ ವೇತನ ಪಾವತಿ ಆದೇಶ (Pension Payment Order) ಇಲ್ಲದೆ ವಯೋನಿವೃತ್ತಿ ಹೊಂದಬಾರದೆಂಬುದು ಸರ್ಕಾರದ ಘೋಷಿತ ನೀತಿಯಾಗಿದೆ.
2. ಆದಾಗ್ಯೂ, ಸರ್ಕಾರಿ ನೌಕರರ ಮತ್ತು ಅಧಿಕಾರಿಗಳ ನಿವೃತ್ತಿ ವೇತನ ಪ್ರಕರಣಗಳನ್ನು ನಿಗಧಿತ ಕಾಲಾವಧಿಯೊಳಗೆ ಇತ್ಯರ್ಥಗೊಳಿಸದೆ ತೀರಾ ವಿಳಂಬ ಮಾಡಲಾಗುತ್ತಿದೆ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿವೆ. ನಿಗಧಿತ ಕಾಲಾವಧಿಯೊಳಗೆ ಮಹಾಲೇಖಪಾಲರಿಗೆ ಕಳುಹಿಸುವ ಮಹತ್ವವನ್ನು ತಿಳಿಯದಿರುವುದು ಎದ್ದು ಕಾಣುತ್ತದೆ. ಆದುದರಿಂದ, ಸದರಿ ಸೂಚನೆಗಳನ್ನು ಮತ್ತೊಮ್ಮೆ ಒತ್ತಿಹೇಳುವ ಅವಶ್ಯಕತೆ ಇದೆಯೆಂದು ಸರ್ಕಾರವು ಮನಗಂಡಿದೆ.
3. ಆದಕಾರಣ, ಇನ್ನು ಮುಂದೆ ವಯೋನಿವೃತ್ತಿ ಹೊಂದಲಿರುವ ಸರ್ಕಾರಿ ನೌಕರರ ನಿವೃತ್ತಿ ವೇತನ ದಾಖಲೆಗಳನ್ನು 12 ತಿಂಗಳು ಮುಂಚಿತವಾಗಿ (ಪ್ರಸ್ತುತ ಅನುಸರಿಸುತ್ತಿರುವ 6 ತಿಂಗಳ ಅವಧಿಯ ರೂಢಿಗತ ಪದ್ಧತಿಯನ್ನು ಮಾರ್ಪಡಿಸಿ) ತಯಾರಿಸಲು ಪ್ರಾರಂಭಿಸಿ, ಹಾಗೆ ತಯಾರಿಸಿದ ಸಂಪೂರ್ಣ ದಾಖಲೆಗಳನ್ನು ವಯೋ ನಿವೃತ್ತಿಗೆ ಕನಿಷ್ಠ 03 ತಿಂಗಳ ಮುಂಚಿತವಾಗಿ ಮಹಾಲೇಖಪಾಲರಿಗೆ ಕಡ್ಡಾಯವಾಗಿ ಕಳುಹಿಸುವ ಮತ್ತು ವಯೋನಿವೃತ್ತಿ ಹೊಂದಲಿರುವ ಪತ್ರಾಂಕಿತ ಸರ್ಕಾರಿ ಅಧಿಕಾರಿಗಳ ಸಂಬಂಧದಲ್ಲಿ ನಮೂನೆ 7-ಎ ರಲ್ಲಿ ಅವಶ್ಯಕ ಮಾಹಿತಿಯನ್ನು, ಮಂಜೂರಾತಿಯೊಂದಿಗೆ, ವಯೋನಿವೃತ್ತಿಯ ದಿನಾಂಕಕ್ಕೆ ಒಂದು ತಿಂಗಳ ಮುಂಚಿತವಾಗಿ ಮಹಾಲೇಖಪಾಲರಿಗೆ ಕಡ್ಡಾಯವಾಗಿ ಕಳುಹಿಸುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದೆಂದು ಈ ಮೂಲಕ ಸೂಚಿಸಲಾಗಿದೆ.



Scanned by CamScanner